**2015 ಕ.ತೀ.ವ. 223**

## ಸನ್ಮಾನ್ಯ ಮುಖ್ಯನ್ಯಾಯಮೂರ್ತಿ ಶ್ರೀ ಡಿ.ಹೆಚ್. ವಘೇಲಾ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್

## ಮೆ: ಐ.ಡಿ.ಇ.ಬಿ. ಪ್ರಾಜೆಕ್ಟ್ಸ್ ಪ್ರೈ. ಲಿ., ಮತ್ತು ಇತರರು –ವಿರುದ್ಧ– ಹೆಚ್.ಡಿ.ಎಫ್.ಸಿ. ಬ್ಯಾಂಕ್ ಲಿಮಿಟೆಡ್ *

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿಗಳು.**

**ಎದುರುದಾರರು ಹೂಡಿದ ಮೇಲ್ಮನವಿಯನ್ನು ಪುರಸ್ಕರಿಸಿ ಹೊರಡಿಸಿದ ಮೇಲ್ಮನವಿ ನ್ಯಾಯಾಧೀಕರಣದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.**

**ಸಾಲ ಮರುಪಾವತಿ ನ್ಯಾಯಾಧಿಕರಣ ನಿಯಮಾವಳಿ 12(6)ರಡಿಯಲ್ಲಿ ಸಾಕ್ಷಿಯನ್ನು ಸಾಕ್ಷೀಕರಿಸಲು ಅವಕಾಶ ನೀಡುವ ವಿವೇಚನೆಯು ನ್ಯಾಯಾಧಿಕರಣಕ್ಕಿರುತ್ತದೆ. ಆದರೆ ಆ ಆದೇಶವನ್ನು ಸಕಾರಣ ನೀಡಿ ಮಾಡಬೇಕಿರುತ್ತದೆ. ಸದರಿ ಪ್ರಕರಣದಲ್ಲಿ ವಿವಾದಿತ ಆದೇಶವನ್ನು ಮಾಡುವಾಗ ನ್ಯಾಯಾಧಿಕರಣವು ಸೂಕ್ತ ಕಾರಣವನ್ನು ನೀಡಿದೆಯೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ವಜಾಗೊಳಿಸಿದೆ.**

| *ಕ್ರ. ಸಂ.* | *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|---|
| *1.* | *2008 (3) ಬಾಂಬೆ, ಸಿ.ಆರ್ 889 ಸೋನು ಟೆಕ್ಸ್‌ಟೈಲ್ಸ್ ಮತ್ತು ಇತರರು –ವಿರುದ್ಧ– ಪಂಜಾಬ್ ನ್ಯಾಷನಲ್ ಬ್ಯಾಂಕ್* | *(ಉಲ್ಲೇ) 4* |

* ರಿಟ್ ಅರ್ಜಿ ಸಂ. 23806/2014 ಮತ್ತು ಇತರೆ (ಜಿಎಂ–ಡಿಆರ್‌ಟಿ), ದಿನಾಂಕ: 23ನೇ ಜೂನ್, 2014.

*2. (2013) 10 ಎಸ್‌ಸಿಸಿ 652*
*ಟಿ.ಪಿ. ವಿಷ್ಣುಕುಮಾರ್ –ವಿರುದ್ಧ– ಕೆನರಾ ಬ್ಯಾಂಕ್,*
*ಪಿ.ಎನ್. ರಸ್ತೆ, ತಿರುಪ್ಪೂರ್ ಮತ್ತು ಇತರರು (ಉಲ್ಲೇ) 5*

*3. ಎಐಆರ್ 2002 ಎಸ್.ಸಿ. 1479*
*ಯೂನಿಯನ್ ಆಫ್ ಇಂಡಿಯಾ ಮತ್ತು ಇನ್ನೊಬ್ಬರು*
*–ವಿರುದ್ಧ– ದೆಹಲಿ ಉಚ್ಚ ನ್ಯಾಯಾಲಯ*
*ವಕೀಲರ ಸಂಘ ಮತ್ತು ಇತರರು (ಉಲ್ಲೇ) 6*

ಅರ್ಜಿದಾರರ ಪರ : ಎಕೆಎಸ್ ಲಾ ಅಸೋಸಿಯೇಟ್ಸ್ ಪರವಾಗಿ
ಶ್ರೀ ಎಸ್. ಅಜೇಶ್ ಕುಮಾರ್ – ವಕೀಲರು ;
ಪ್ರತ್ಯರ್ಜಿದಾರರ ಪರ : ಶ್ರೀ ಶ್ರೀವತ್ಸ – ಹಿರಿಯ ವಕೀಲರು ;
ಶ್ರೀ ಹೆಚ್.ಎಂ. ಸುಧೀರ್ – ವಕೀಲರು ;
ಮೆ: ವಾಡಿಯಾ ಘಾಂದಿ & ಕಂ., (ಸೌತ್) ಸಿ/ಆರ್

## ಆಜ್ಞೆ

**ಮುಖ್ಯನ್ಯಾಯಮೂರ್ತಿ ಶ್ರೀ ಡಿ.ಹೆಚ್. ವಘೇಲಾ (ಮೌಖಿಕ) :**

1. ಅರ್ಜಿದಾರರು ಎಂ.ಎ. ಸಂಖ್ಯೆ 3/2014ರಲ್ಲಿ, ಚೆನ್ನೈನಲ್ಲಿ ಸಾಲ ವಸೂಲಾತಿ ಅಪೀಲು ನ್ಯಾಯಾಧಿಕರಣದ ದಿನಾಂಕ 06.03.2014ರ ಆದೇಶವನ್ನು ಪ್ರಶ್ನಿಸಲು, ಸಂವಿಧಾನದ ಅನುಚ್ಛೇದ 227ರ ಮೊರೆ ಹೋಗಿದ್ದಾರೆ. ಎಂ.ಎ. ಸಂಖ್ಯೆ 3/2014ನ್ನು ಮಾನ್ಯ ಅಧ್ಯಕ್ಷಾಧಿಕಾರಿ, ಸಾಲ ವಸೂಲಾತಿ ನ್ಯಾಯಾಧಿಕರಣ (ಸಂಕ್ಷಿಪ್ತವಾಗಿ ಡಿ.ಆರ್.ಟಿ.), ಬೆಂಗಳೂರು ಇವರ ದಿನಾಂಕ 07.11.2013ರ ಆದೇಶದಿಂದ ಮಂಡಿಸಲಾಯಿತೆಂದು, ಮತ್ತು ಡಿ.ಆರ್.ಟಿ. ಆದೇಶವು ಎ.ಡಬ್ಲ್ಯೂ.1ನ್ನು ಪಾಟೀಸವಾಲು ಮಾಡಲು ಕೋರುವ ಮಧ್ಯಕಾಲೀನ ಅರ್ಜಿ ಸಂಖ್ಯೆ 4835/2012ರ ಮೇಲೆ ಮಾಡಿರುವ ಆದೇಶವಾಗಿತ್ತೆಂದು ಹೇಳಲಾಗಿದೆ. ಮಧ್ಯಕಾಲೀನ ಅರ್ಜಿ

ಸಂಖ್ಯೆ 4835/2012ನ್ನು ಈ ನ್ಯಾಯಾಲಯದ ಮುಂದೆ ಅರ್ಜಿದಾರರಾಗಿರುವ ಮೂಲ ಪ್ರತಿವಾದಿಗಳು ಸಲ್ಲಿಸಿದ್ದಾರೆ. ಮತ್ತು ಇಲ್ಲಿನ ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರ ವಾದಗಳು ಅತ್ಯಂತ ಹೆಚ್ಚಿನ ಸಂಭಾವ್ಯತೆಗಳನ್ನು ಒಳಗೊಂಡಿರುವುದಾಗಿ ಕಂಡುಬಂದಿರುವುದರ ಆಧಾರದ ಮೇಲೆ ಮಾತ್ರ ಡಿ.ಆರ್.ಟಿ. ಈ ಅರ್ಜಿಯನ್ನು ಅನುಮತಿಸಿತ್ತು. ಆದೇಶದ ಆ ನಿರ್ಣಾಯಕ ಭಾಗಕ್ಕೆ ಮುಂಚೆ, ಇದರಲ್ಲಿ ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರ ವಾದಗಳನ್ನು ಮಾತ್ರ ದಾಖಲಿಸಲಾಗಿತ್ತು ಮತ್ತು ಆ ಆದೇಶವನ್ನು ಡಿ.ಆರ್.ಟಿ. ಸಮಕ್ಷಮದಲ್ಲಿ ಪ್ರತ್ಯರ್ಜಿದಾರರು ಪ್ರಶ್ನಿಸಿದ್ದಾರೆ. ಪ್ರತ್ಯರ್ಜಿದಾರರ ಸಾಕ್ಷಿದಾರನ ಪಾಟೀಸವಾಲನ್ನು ಅನುಮತಿಸಿದ, ಹಿಂದೆ ಹೇಳಿದ ಡಿ.ಆರ್.ಟಿ. ಆದೇಶವನ್ನು "ಅಪೀಲುದಾರ ಬ್ಯಾಂಕ್ ನೀಡಿದ ವಿವರಪಟ್ಟಿಯ ಅನುಸಾರ, ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಈಗಾಗಲೇ ಕೆಳಗಿನ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ ಮತ್ತು ಆದ್ದರಿಂದ ಬ್ಯಾಂಕಿನ ಸಾಕ್ಷಿದಾರನ ವಿಚಾರಣೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಕಂಡುಬಂದಿದೆ" ಎಂಬ ಕಾರಣವನ್ನು ವಾಸ್ತವಿಕವಾಗಿ ದಾಖಲಿಸುವ ಮೂಲಕ ಡಿ.ಆರ್.ಎ.ಟಿ.ಯ ಪ್ರಶ್ನಿತ ಆದೇಶದಿಂದ ತಳ್ಳಿಹಾಕಲಾಗಿದೆ. ಇಲ್ಲಿ ಪ್ರತ್ಯರ್ಜಿದಾರರ ಅಪೀಲನ್ನು ಅನುಮತಿಸುವಾಗ ಡಿ.ಆರ್.ಎ.ಟಿ.ಯು, ಅರ್ಜಿದಾರರು ಈಗಾಗಲೇ ಲಭ್ಯವಿರುವ ದಾಖಲೆಗಳ ಮೇಲೆ ತಮ್ಮ ಸಲ್ಲಿಕೆಗಳು ಆಧಾರವಾಗುವಂತೆ ಮಾಡಬಹುದೆಂದು ಮತ್ತು ಆದ್ದರಿಂದ ಡಿ.ಆರ್.ಟಿ. ಆದೇಶವು ತಳ್ಳಿಹಾಕಲು ತಕ್ಕದ್ದಾಗಿದೆಯೆಂದು ಸಹ ಅಭಿಪ್ರಾಯಪಟ್ಟಿದೆ.

2. ಇಲ್ಲಿನ ಪ್ರತ್ಯರ್ಜಿದಾರ ಬ್ಯಾಂಕಿನ ಪರ ಹಾಜರಾದ ಮಾನ್ಯ ಹಿರಿಯ ವಕೀಲರಾದ ಶ್ರೀ ಶ್ರೀವತ್ಸರವರು ಹಾಜರಾಗುವುದಕ್ಕೆ ಸಂಬಂಧಿಸಿದ ತಡೆ ಅರ್ಜಿಗಾಗಿ, ಪ್ರವೇಶದ ಹಂತದಲ್ಲಿ ಅಂತಿಮ ವಿಲೆಗಾಗಿ ಅರ್ಜಿದಾರರನ್ನು ಸವಿಸ್ತಾರವಾಗಿ ಸುನಾವಣೆ ಮಾಡಲಾಯಿತು.

3. ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಅಜೇಶ್ ಕುಮಾರ್ ಶಂಕರ್‌ರವರು ಡಿ.ಆರ್.ಟಿ. ಸಮಕ್ಷಮದಲ್ಲಿ ಯಶಸ್ವಿಯಾಗಿ ವಾದಿಸಿರುವಂತೆ,

ಅರ್ಜಿದಾರರು ಪ್ರತ್ಯರ್ಜಿದಾರ–ಬ್ಯಾಂಕ್‌ನಿಂದ ಯಂತ್ರೋಪಕರಣಗಳ ಮಾರಾಟಕ್ಕೆ ಮತ್ತು ಅಂಥ ಮಾರಾಟಗಳಿಂದ ಬರುವ ಮಾರಾಟದ ಉತ್ಪತ್ತಿಗಳ ವಿನಿಯೋಜನೆಗೆ ಸಂಬಂಧಿಸಿದಂತೆ ಗಂಭೀರವಾದ ವಿವಾದಗಳನ್ನು ಎತ್ತಿದ್ದಾರೆಂದು ತೀವ್ರವಾಗಿ ವಾದಿಸಿದ್ದಾರೆ. ಅವರು ಮುಂದುವರೆದು, ಪ್ರಶ್ನೆಯಲ್ಲಿರುವ ವಿವಾದಗಳಿಗೆ ಬ್ಯಾಂಕಿನ ಸಾಕ್ಷಿದಾರನ ಪಾಟೀಸವಾಲಿನಿಂದ ಸ್ಪಷ್ಟಚಿತ್ರಣ ಹೊಂದಲು ನೆರವಾಗುತ್ತದೆ ಎಂಬ ಅಭಿಪ್ರಾಯವನ್ನು ಡಿ.ಆರ್.ಟಿ. ವ್ಯಕ್ತಪಡಿಸಿದೆಯೆಂದು ಹೇಳಿದ್ದಾರೆ. ಮತ್ತು ಪ್ರತ್ಯರ್ಜಿದಾರ ಬ್ಯಾಂಕು ಮಹತ್ವದ ಸಂಗತಿಗಳನ್ನು ಅಡಗಿಸುವ ಅಥವಾ ತನ್ನ ತಪ್ಪುಗಳನ್ನು ಮುಚ್ಚಿಡುವ ಉದ್ದೇಶವಿಲ್ಲದಿದ್ದಲ್ಲಿ, ಸಾಕ್ಷಿಯು ಪಾಟೀಸವಾಲಿಗಾಗಿ ಅರ್ಜಿದಾರರ ಅರ್ಜಿಯನ್ನು ವಿರೋಧಿಸುತ್ತಿರಲಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಅವರು, ಅಫಿಡವಿಟ್ಟನ್ನು ಸಲ್ಲಿಸುವ ಮೂಲಕ ಡಿ.ಆರ್.ಟಿ. ಸಮಕ್ಷಮದಲ್ಲಿ ಹೇಳಿಕೆಕೊಟ್ಟ ಬ್ಯಾಂಕಿನ ಸಾಕ್ಷಿದಾರನನ್ನು ಪಾಟೀಸವಾಲು ಮಾಡಲು ಅನುಮತಿಸದಿದ್ದಲ್ಲಿ, ಅದು ನ್ಯಾಯವಾದ ವ್ಯವಹಾರ, ಸಮಾನಾವಕಾಶ ಮತ್ತು ಸ್ವಾಭಾವಿಕ ನ್ಯಾಯದ ಮೂಲತತ್ವಗಳ ನಿರಾಕರಣೆಯಾಗುತ್ತದೆಂದು ಸಹ ಅಭಿಪ್ರಾಯಪಟ್ಟಿದ್ದಾರೆ.

4. ಅರ್ಜಿದಾರನ ಪರ ಹಾಜರಾದ ಮಾನ್ಯ ವಕೀಲರು ಡಿ.ಆರ್.ಟಿ. ಸಮಕ್ಷಮದಲ್ಲಿ ಅದೇ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಮಾನ್ಯ ಏಕಸದಸ್ಯಪೀಠ ನ್ಯಾಯಾಲಯದ ದಿನಾಂಕ 24.01.2013ರ ಈ ಮೊದಲಿನ ಆದೇಶದ ಮೇಲೆ ಅವಲಂಬಿಸಿದ್ದು, ಅದರಲ್ಲಿ ಡಿ.ಆರ್.ಟಿ. ಮುಂದಿನ ವಾದಗಳಿಗೆ ತಿದ್ದುಪಡಿಯನ್ನು ಕೋರಿದಾಗ ಈಗಿನ ಅರ್ಜಿದಾರರ ಅರ್ಜಿಯು ವಜಾಗೊಂಡಿತು. ಅರ್ಜಿಯನ್ನು ಗುಣಾರ್ಹತೆಗಳ ಆಧಾರದ ಮೇಲೆ ಸ್ವೀಕರಿಸಲಾಯಿತೆಂಬ ಪ್ರಸ್ತಾವಕ್ಕೆ ಪೂರ್ವನಿದರ್ಶನವಾಗಿ ಅದನ್ನು ಉಲ್ಲೇಖಿಸಲಾಯಿತು. ಅವರು ***ಸೋನು ಟೆಕ್ಸ್‌ಟೈಲ್ಸ್ ಮತ್ತು ಇತರರು –ವಿರುದ್ಧ– ಪಂಜಾಬ್ ನ್ಯಾಷನಲ್ ಬ್ಯಾಂಕ್*** [1], ಪ್ರಕರಣದಲ್ಲಿ ಬಾಂಬೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ಮೇಲೆ ಸಹ

1. 2008 (3) ಬಾಂಬೆ, ಸಿ.ಆರ್ 889

ಅವಲಂಬಿತರಾಗಿದ್ದು, ಋಣವಸೂಲಿ ನ್ಯಾಯಮಂಡಳಿ (ಕಾರ್ಯವಿಧಾನ) ನಿಯಮಗಳು, 1993 (ಸಂಕ್ಷಿಪ್ತವಾಗಿ 'ಡಿ.ಆರ್.ಟಿ ನಿಯಮಗಳು')ರ 12(6)ನೇ ನಿಯಮದ ಅಡಿಯಲ್ಲಿ ನ್ಯಾಯಮಂಡಳಿಯ ಅಧಿಕಾರಗಳನ್ನು ಚಲಾಯಿಸುವಾಗ ಅಷ್ಟರಮಟ್ಟಿಗೆ ಅದರಲ್ಲಿ ಮಾಡಲಾದ ಪರಿಶೀಲನೆಗಾಗಿ, ಪಾಟೀಸವಾಲಿನ ಉದ್ದೇಶವು, ಸಾಮಾನ್ಯವಾಗಿ ಸಾಕ್ಷಿದಾರನ ಸತ್ಯಶೀಲತೆಯನ್ನು ಪರೀಕ್ಷಿಸಿ, ವಾಸ್ತವಿಕ ಮತ್ತು ಸರಿಯಾದ ಸಂಗತಿಗಳನ್ನು ಅಧಿಕೃತವಾಗಿ ದಾಖಲಿಸುವುದಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇವು ಮೂಲತಃ ವಸ್ತುನಿಷ್ಠವಾಗಿ ಮತ್ತು ಸ್ಪಷ್ಟ ಉದ್ದೇಶದೊಂದಿಗೆ ನ್ಯಾಯೋದ್ದೇಶಗಳನ್ನು ಪೂರೈಸಲು ಜಾರಿಗೆ ತರಬೇಕಾದ ಪ್ರಕ್ರಿಯಾ ಕಾನೂನಿಗೆ ಸಂಬಂಧಿಸಿದ ವಿಷಯಗಳಾಗಿವೆ. ಪಕ್ಷಕಾರರಿಗೆ ಅವರ ಸಾಕ್ಷ್ಯವನ್ನು ಮುನ್ನಡೆಸಲು, ಸಹಜವಾಗಿ, 12(6)ನೇ ನಿಯಮದ ಉಪಬಂಧಗಳ ಅನುಸಾರ ಸೂಕ್ತ ಅವಕಾಶವನ್ನು ನೀಡುವಾಗ, ನ್ಯಾಯಮಂಡಳಿಯು ವಿವಾದಗಳನ್ನು ಪೂರ್ಣವಾಗಿ ಮತ್ತು ಅಂತಿಮವಾಗಿ ನಿರ್ಧರಿಸಬೇಕೆಂದು ಸಹ ಆ ತೀರ್ಪಿನಲ್ಲಿ ಅಭಿಪ್ರಾಯಪಡಲಾಗಿದೆ. ನಿಯಮ 12(6)ರಲ್ಲಿ ಕಂಡುಬರುವ "ಹಾಗೆ ಮಾಡುವ ಅಗತ್ಯತೆ" ಎಂಬ ಪದಗಳು ಬಹಳ ಮಹತ್ವವುಳ್ಳದ್ದಾಗಿವೆ ಮತ್ತು ಅದು ಪಾಟೀಸವಾಲನ್ನು ಅನುಮತಿಸುವುದಕ್ಕೆ ಅರ್ಜಿ ಹಾಕುವ ಮುಂಚೆ ಮನದಟ್ಟು ಮಾಡಿಕೊಳ್ಳಬೇಕಾದ ಅತ್ಯಂತ ಅವಶ್ಯಕ ಪರಿಸ್ಥಿತಿಯಾಗಿದೆಯೆಂಬುದನ್ನು ಒತ್ತಿ ಹೇಳಿದೆ. ಆ ಆಧಾರದ ಮೇಲೆ, ಅರ್ಜಿದಾರರ ಈಗಿನ ಪ್ರಕರಣವು ಸಾಕ್ಷಿದಾರನ ಪಾಟೀಸವಾಲಿಗಾಗಿ ಕೋರಿರುವ ಯೋಗ್ಯ ಪ್ರಕರಣವಾಗಿದ್ದ ಅದನ್ನು ಅನುಮತಿಸಬೇಕಾದ ಅಗತ್ಯತೆಯಿದೆಯೆಂದು ಮತ್ತು ವಾಸ್ತವವಾಗಿ ಡಿ.ಆರ್.ಟಿ.ಯು ಬ್ಯಾಂಕಿನ ಕ್ಲೇಮನ್ನು ಮತ್ತು ಅರ್ಜಿದಾರರ ಪ್ರತಿವಾದವನ್ನು ಪೂರ್ಣವಾಗಿ ಮತ್ತು ಅಂತಿಮವಾಗಿ ನಿರ್ಧರಿಸಲು ಹಾಗೂ ತೀರ್ಮಾನಿಸಲು ಅನುಮತಿಸಿದೆಯೆಂದು ಅಭಿಪ್ರಾಯಪಡಲಾಯಿತು.

5. ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ವಕೀಲರು, ಅನುಚ್ಛೇದ 226 ಅಥವಾ 227ರ ಅಡಿಯಲ್ಲಿ ಅರ್ಜಿಗಳನ್ನು ಪುರಸ್ಕರಿಸುವ ಅಂಶಕ್ಕೆ

ಸಂಬಂಧಿಸಿದಂತೆ ಕಾನೂನಿನ ಇತ್ತೀಚಿನ ಸ್ಪಷ್ಟೀಕರಣವು ಅರ್ಜಿದಾರರು ಪಡೆಯಬೇಕೆಂದು ಕೋರಿರುವ ಪರಿಹಾರವನ್ನು ತಡೆಹಿಡಿಯುತ್ತದೆಯೆಂದು, ಮತ್ತು ಡಿ.ಆರ್.ಎ.ಟಿ. ಆದೇಶವು ನ್ಯಾಯಯುತ ಹಾಗೂ ಸೂಕ್ತವಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಮಾನ್ಯ ಹಿರಿಯ ವಕೀಲರು ಈ ಕೆಳಗಿನ ಪ್ರಸ್ತಾವಗಳಿಗಾಗಿ ***ಟಿ.ಪಿ. ವಿಷ್ಣುಕುಮಾರ್ –ವಿರುದ್ಧ– ಕೆನರಾ ಬ್ಯಾಂಕ್, ಪಿ.ಎನ್. ರಸ್ತೆ, ತಿರುಪ್ಪೂರ್ ಮತ್ತು ಇತರರು*** [2]**,** ಪ್ರಕರಣದಲ್ಲಿ ಅಪೆಕ್ಸ್ (ಸರ್ವೋಚ್ಚ) ನ್ಯಾಯಾಲಯದ ಇತ್ತೀಚಿನ ನಿರ್ಣಯದ ಮೇಲೆ ಅವಲಂಬಿತರಾಗಿದ್ದಾರೆ :

> "9. ಪಕ್ಷಕಾರರಿಗೆ ಪ್ರತಿಕೂಲ ಪ್ರಭಾವವನ್ನುಂಟು ಮಾಡುವ ಯಾವುದೇ ಶಾಸನದ ಉಲ್ಲಂಘನೆಯಾದ ಹೊರತು ಅಥವಾ ಅಂಥ ವ್ಯವಹರಣೆಗಳು ಅಥವಾ ಕ್ರಮವು ಸಂಪೂರ್ಣವಾಗಿ ಮಧ್ಯಸ್ಥಿಕೆ, ಅಸಮಂಜಸ ಮತ್ತು ಅನುಚಿತವಾದ ಹೊರತು, ಅಧಿನಿಯಮದ ಅಡಿಯಲ್ಲಿ ಕೊಡಬೇಕಾದ್ದನ್ನು ಪಡೆಯುವ ವಿಷಯದಲ್ಲಿ ಅನುಚ್ಛೇದ 226ರ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರಗಳನ್ನು ಕೋರಲಾಗುವುದಿಲ್ಲ. ನಮ್ಮ ಅಭಿಪ್ರಾಯದಲ್ಲಿ, ಅಧಿನಿಯಮದ ಪ್ರಕರಣ 20ರ ಅಡಿಯಲ್ಲಿನ ಅಪೀಲಿನಿಂದ, ಅಧಿನಿಯಮವು ತಾನೇ ಒಂದು ಕಾರ್ಯವಿಧಾನವನ್ನು ಉಪಬಂಧಿಸುವಾಗ, ನ್ಯಾಯಮಂಡಳಿಯು ಅರ್ಜಿಗಳನ್ನು ತಿರಸ್ಕರಿಸುವುದು ಸರಿಯೇ? ಅಥವಾ ಅಲ್ಲವೇ? ಎಂಬುದನ್ನು ಪರಿಶೀಲಿಸಲು ಭಾರತ ಸಂವಿಧಾನದ ಅನುಚ್ಛೇದ 226ರ ಅಡಿಯಲ್ಲಿ ಅಧಿಕಾರ ವ್ಯಾಪ್ತಿಯನ್ನು ಕೋರುವಲ್ಲಿ ಉಚ್ಚ ನ್ಯಾಯಾಲಯವು ಸಮರ್ಥವಾಗಿಲ್ಲ. ಬ್ಯಾಂಕು ಅಥವಾ

2. (2013) 10 ಎಸ್‌ಸಿಸಿ 652

ನ್ಯಾಯಮಂಡಳಿಯು ಅರ್ಜಿದಾರರ ಮತ್ತು ಪ್ರತ್ಯರ್ಜಿದಾರರ ಅರ್ಜಿಗಳನ್ನು ತಿರಸ್ಕರಿಸುವ ಮೂಲಕ ಯಾವುವೇ ಶಾಸನಾತ್ಮಕ ಉಪಬಂಧಗಳನ್ನು ಉಲ್ಲಂಘಿಸಿದೆಯೆಂದು ಅವರಿಂದ ಸಮಂಜಸವಾದ ವಾದವಿಲ್ಲ.

10. ರಿಟ್ ಅರ್ಜಿಯನ್ನು, ಅರ್ಜಿಗಳನ್ನು ತಿರಸ್ಕರಿಸುವುದರ ವಿರುದ್ಧ ಸಲ್ಲಿಸಲಾಯಿತು ಮತ್ತು ಅದನ್ನು ಮಾನ್ಯ ಏಕಸದಸ್ಯಪೀಠ ನ್ಯಾಯಾಧೀಶರು ಪುರಸ್ಕರಿಸಿ, ಅದರ ಗುಣಾರ್ಹತೆಗಳ ಆಧಾರದ ಮೇಲೆ ತೀರ್ಮಾನಿಸಿರುತ್ತಾರೆ. ಮತ್ತು ಅದು ನಮ್ಮ ದೃಷ್ಟಿಯಲ್ಲಿ, ಸಂವಿಧಾನದ ಅನುಚ್ಛೇದ 226ರ ಅಡಿಯಲ್ಲಿ ಅದರ ಅಧಿಕಾರ ವ್ಯಾಪ್ತಿಯನ್ನು ಬಳಸುವಾಗ ಅನುಮತೀಯವಾದದ್ದಲ್ಲ. ನ್ಯಾಯಾಧಿಕರಣವು ಹೊರಡಿಸಿದ ಪ್ರತಿಯೊಂದು ಮಧ್ಯಕಾಲೀನ ಆದೇಶದ ಯಥಾರ್ಥತೆ ಅಥವಾ ಸಾಧಕ–ಬಾಧಕಗಳನ್ನು, ರಿಟ್ ನ್ಯಾಯಾಲಯದಲ್ಲಿ ಪರಿಶೀಲಿಸಬೇಕಿದ್ದಲ್ಲಿ, ಅದು ಅಂಥ ನ್ಯಾಯಮಂಡಳಿಯ ಸ್ಥಾಪನೆಯ ಗುರಿ ಮತ್ತು ಉದ್ದೇಶವನ್ನು ವಿಫಲಗೊಳಿಸುತ್ತದಷ್ಟೇ. ರಿಟ್ ನ್ಯಾಯಾಲಯದ ಮಧ್ಯಸ್ಥಿಕೆಯಿಂದಾಗಿ, ಈ ವಿಷಯವು ಅಧಿನಿಯಮದ ಉದ್ದೇಶ ಮತ್ತು ಗುರಿಯನ್ನು ವಿಫಲಗೊಳಿಸಿ, ನಾಲ್ಕು ವರ್ಷ ವಿಳಂಬವಾಗಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಆದ್ದರಿಂದ, ನಾವು ಈ ಅರ್ಜಿಗಳಲ್ಲಿ ಯಾವುದೇ ಗುಣಾರ್ಹತೆಗಳಿಲ್ಲವೆಂದು ನಿರ್ಣಯಿಸಿದ್ದೇವೆ ಮತ್ತು ಅವುಗಳನ್ನು ವಜಾ ಮಾಡಲಾಗಿದೆ".

6. ಈ ಕೆಳಗಿನಂತೆ ವಿಸ್ತೃತ ಚರ್ಚೆಯ ಮೂಲಕ ವಿಷಯದ ಬಗ್ಗೆ ಕಾನೂನನ್ನು ಸ್ಪಷ್ಟೀಕರಿಸಿ, ***ಯೂನಿಯನ್ ಆಫ್ ಇಂಡಿಯಾ ಮತ್ತು ಇನ್ನೊಬ್ಬರು –ವಿರುದ್ಧ– ದೆಹಲಿ ಉಚ್ಚ ನ್ಯಾಯಾಲಯ ವಕೀಲರ ಸಂಘ ಮತ್ತು ಇತರರು*** [3]**,** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಈ ಮೊದಲಿನ ತೀರ್ಪಿನ ಮೇಲೆ ಅವಲಂಬಿಸಿ, ಈ ರೀತಿ ಸಹ ಅಭಿಪ್ರಾಯಪಡಲಾಯಿತು :

> ‘‘23. ಬೇರೆ ರೀತಿಯಲ್ಲಿ ಹೇಳುವುದಾದರೆ, ನ್ಯಾಯಮಂಡಳಿಯು ಯಾವುದೇ ನಿರ್ದಿಷ್ಟ ಸಂಗತಿಯನ್ನು ಅಫಿಡವಿಟ್‌ನಿಂದ ರುಜುವಾತುಪಡಿಸಬೇಕೆಂದು ಅಗತ್ಯಪಡಿಸುವ ಅಧಿಕಾರವನ್ನು ಹೊಂದಿದೆ, ಅಥವಾ ಅದು ಯಾವುದೇ ಸಾಕ್ಷಿಯ ಅಫಿಡವಿಟ್ಟನ್ನು ಸುನಾವಣೆಯಲ್ಲಿ ಓದಬಹುದೆಂದು ಆದೇಶಿಸಬಹುದು. ಅಂಥ ಆದೇಶವನ್ನು ಹೊರಡಿಸುವಾಗ, ಅದಕ್ಕೆ ಸಾಕಷ್ಟು ಕಾರಣಗಳನ್ನು ದಾಖಲಿಸಬೇಕು. ನ್ಯಾಯಮಂಡಳಿಯು, ಸ್ವತಃ ತಾನೇ, ಅಫಿಡವಿಟ್‌ನಿಂದ ಯಾವುದೇ ನಿರ್ದಿಷ್ಟ ಸಂಗತಿಯನ್ನು ರುಜುವಾತುಪಡಿಸಲು ಅಥವಾ ಸಾಕ್ಷಿಯ ಅಫಿಡವಿಟ್ಟನ್ನು ಸುನಾವಣೆಯಲ್ಲಿ ಓದಲು, ನಿರ್ದೇಶನ ನೀಡಲು ಇಚ್ಛಿಸಿದಲ್ಲಿ ಮಾತ್ರ ಆರ್. (ನಿಯಮ) 12(6)ಕ್ಕೆ ಪರಂತುಕವು ನಿಶ್ಚಿತವಾಗಿ ಅನ್ವಯವಾಗುತ್ತದೆ. ಸದರಿ ಪರಂತುಕವು, ಪಾಟೀ ಸವಾಲಿಗಾಗಿ ಸಾಕ್ಷಿದಾರರನ್ನು ಹಾಜರುಪಡಿಸುವುದಕ್ಕಾಗಿ ಅರ್ಜಿದಾರ ಅಥವಾ ಪ್ರತಿವಾದಿಯ ಇಚ್ಛೆಗೆ ಸಂಬಂಧಪಡುತ್ತದೆ. ಸದರಿ ಪರಂತುಕವು ಬರುವ ಸನ್ನಿವೇಶದಲ್ಲಿ ಪಕ್ಷಕಾರರು ತಮಗೆ ಸಂಬಂಧಿಸಿದ ಪ್ರಕರಣಗಳ ಪರವಾಗಿ ಒಮ್ಮೆ

3. ಎಐಆರ್ 2002 ಎಸ್.ಸಿ. 1479

ಅಫಿಡವಿಟ್‌ಗಳನ್ನು ಸಲ್ಲಿಸಿದ್ದರೆ, ಆ ನಂತರ ಮಾತ್ರವೇ ಸಾಕ್ಷಿದಾರನನ್ನು ಪಾಟೀಸವಾಲು ಮಾಡುವ ಇಚ್ಛೆಯು ಕಾನೂನುಸಮ್ಮತವಾಗಿ ಉದ್ಭವಿಸುತ್ತದೆಂದು ನಮಗೆ ಕಂಡುಬರುತ್ತದೆ. ಆ ಸಮಯದಲ್ಲಿ ಅಂಥ ಸಾಕ್ಷಿದಾರರನ್ನು ಹಾಜರುಪಡಿಸಬಹುದೆಂದು ನ್ಯಾಯಮಂಡಳಿಗೆ ಕಂಡುಬಂದಲ್ಲಿ, ಹಾಗೆ ಮಾಡುವುದು ಅಗತ್ಯವಾಗುತ್ತದೆ ಮತ್ತು ಸಾಕ್ಷಿದಾರನನ್ನು ಪಾಟೀಸವಾಲಿಗಾಗಿ ಹಾಜರುಪಡಿಸಬೇಕೆಂದು ಅಗತ್ಯಪಡಿಸತಕ್ಕದ್ದು ಎಂದು ಪ್ರಕರಣವನ್ನು ಮುಂದುವರೆಸುವ ಅಪೇಕ್ಷೆಯಲ್ಲಿ ಮತ್ತು ಅವನು ಹಾಜರಾಗದಿರುವ ಸಂದರ್ಭದಲ್ಲಿ, ಆಗ ಅಫಿಡವಿಟ್ಟನ್ನು ಸಾಕ್ಷ್ಯವನ್ನಾಗಿ ತೆಗೆದುಕೊಳ್ಳತಕ್ಕದ್ದಲ್ಲ. ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯವು ಅನುಚ್ಛೇದ 226 ಮತ್ತು ಅನುಚ್ಛೇದ 32ರ ಅಧಿಕಾರವನ್ನು ಚಲಾಯಿಸಿ, ಸಾಧಾರಣವಾಗಿ ಅದರ ಮುಂದೆ ಸಲ್ಲಿಸಿರುವ ದಾಖಲೆಗಳು ಮತ್ತು ಅಫಿಡವಿಟ್‌ಗಳ ಆಧಾರದ ಮೇಲೆ ಮಾತ್ರ ಸಂಗತಿಯ ಮತ್ತು ಕಾನೂನಿನ ಪ್ರಶ್ನೆಗಳನ್ನು ನಿರ್ಣಯಿಸಬಹುದಾಗಿದ್ದಾಗ, ನ್ಯಾಯಮಂಡಳಿಗೆ ಆ ರೀತಿ, ಕೇವಲ ತನ್ನ ಮುಂದೆ ಇರುವ ದಾಖಲೆಗಳು ಮತ್ತು ಅಫಿಡವಿಟ್‌ಗಳ ಆಧಾರದ ಮೇಲೆ ಪ್ರಕರಣವನ್ನು ನಿರ್ಣಯಿಸಲು ಏಕೆ ಸಾಧ್ಯವಾಗುವುದಿಲ್ಲ ಎಂಬುದಕ್ಕೆ ಯಾವುದೇ ಕಾರಣವಿರತಕ್ಕದ್ದಲ್ಲ. ಬ್ಯಾಂಕಿನಲ್ಲಿ ಮೌಖಿಕವಾಗಿ ಆಗಲಿ ಮತ್ತು ಪತ್ರಗಳ ಅಥವಾ ಔಪಚಾರಿಕ ಒಪ್ಪಂದ ಪತ್ರಗಳ ರೂಪದಲ್ಲಾಗಲಿ ಸೂಕ್ತ ದಾಖಲೆ ಪತ್ರಗಳಿಲ್ಲದೆ ಯಾವುದೇ ವ್ಯವಹಾರ ಸಾಧ್ಯವಿಲ್ಲವೆಂಬುದು ಸಾಮಾನ್ಯ ಜ್ಞಾನವಾಗಿದೆ. ಅಂಥ ಸಂದರ್ಭದಲ್ಲಿ ಸಾಕ್ಷಿದಾರನ ಮೌಖಿಕ ವಿಚಾರಣೆಯ ಪ್ರಾಮಾಣಿಕ ಅಗತ್ಯವು ಅಪರೂಪವಾಗಿ

> ಉದ್ಭವಿಸತಕ್ಕದ್ದು. ಅಫಿಡವಿಟ್‌ಗಳನ್ನು ತೀರ್ಮಾನಿಸಲು ಬಹಳ ಸಮಂಜಸವಾದ ಕಾರಣವಿರಬೇಕಿದ್ದು, ಇಂಥ ಪ್ರಕರಣದಲ್ಲಿ ಅದು ಸಾಕಾಗುವುದಿಲ್ಲ."

7. ಈಗಿನ ವ್ಯವಹರಣೆಗಳ ಸಂಬಂಧಪಟ್ಟ ಸಂಗತಿಗಳನ್ನು ಪರಿಶೀಲಿಸಿ, ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರು ಪ್ರತ್ಯರ್ಜಿದಾರನ ಕ್ಲೇಮಿನ ಅಫಿಡವಿಟ್ಟನ್ನು ಪ್ರಸ್ತಾಪಿಸಿದ್ದು, ಅದರಲ್ಲಿ ಬ್ಯಾಂಕಿನ ನೇಮಿತ ಅಟಾರ್ನಿ ಮತ್ತು ರಿಕವರಿ ಮ್ಯಾನೇಜರ್‌ರವರು ವಾಸ್ತವವಾಗಿ ವ್ಯವಹಾರದ ಸಾಮಾನ್ಯ ಮತ್ತು ನಿಯಮಿತ ಕ್ರಮದಲ್ಲಿ, ಬ್ಯಾಂಕು ನಿರ್ವಹಿಸಿಕೊಂಡು ಬಂದ ದಾಖಲೆಗಳ ಭಾಗದ ಮೇಲೆ ಬ್ಯಾಂಕಿನ ಕ್ಲೇಮು ಆಧಾರಿತವಾಗಿದೆಯೆಂದು ಮಾತ್ರ ಹೇಳಿಕೆ ನೀಡಿದ್ದಾರೆ. ಅಂಥ ಅಫಿಡವಿಟ್‌ನೊಂದಿಗೆ ಸುಮಾರು 68 ದಸ್ತಾವೇಜುಗಳನ್ನು ಸಲ್ಲಿಸಲಾಗಿತ್ತು. ಅದಕ್ಕೆ ವಿರುದ್ಧವಾಗಿ, ಅರ್ಜಿದಾರ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ಅಫಿಡವಿಟ್‌ನೊಂದಿಗೆ ಅರ್ಜಿಯನ್ನು ಪ್ರತ್ಯರ್ಜಿದಾರ ಬ್ಯಾಂಕಿನ ವ್ಯವಸ್ಥಾಪಕ/ಅಧಿಕೃತ ಪ್ರತಿನಿಧಿಯನ್ನು ಪಾಟೀಸವಾಲು ಮಾಡಲು ಅರ್ಜಿದಾರರನ್ನು ಅನುಮತಿಸಲು ಕೋರಿ ಸಲ್ಲಿಸಲಾಗಿತ್ತು. ಈ ವಿಷಯದಲ್ಲಿ ಅರ್ಜಿದಾರ ಅಫಿಡವಿಟ್‌ನ ಮುಖ್ಯ ವಾದವೆಂದರೆ, ಅರ್ಜಿದಾರರು, ಸ್ಥಿರಯಂತ್ರ ಮತ್ತು ಯಂತ್ರಸಾಧನಗಳನ್ನು ಮಾರಿದ್ದರೆಂದು ಪ್ರತ್ಯರ್ಜಿದಾರ–ಬ್ಯಾಂಕು ವಾದಿಸಿದ್ದು, ಆ ಕಾರಣದಿಂದ ಪರಿಷ್ಕರಣೆ ಹಾಗೂ ಹಣಕಾಸು ಸ್ವತ್ತುಗಳ ಮರುನಿರ್ಮಾಣ ಹಾಗೂ ಭದ್ರತಾ ಜಾರಿಹಿತಾಸಕ್ತಿ ಅಧಿನಿಯಮ, 2002 (ಸಂಕ್ಷಿಪ್ತವಾಗಿ.'ಎಸ್.ಎ.ಆರ್.ಎಫ್.ಎ.ಇ.ಎಸ್.ಐ. ಅಧಿನಿಯಮ)ದ ಅಡಿಯಲ್ಲಿ ನಿಗದಿಪಡಿಸಲಾದ ಕಾರ್ಯವಿಧಾನವನ್ನು ಅನುಸರಿಸದೆ, ಬ್ಯಾಂಕ್ ಸ್ಥಿರಯಂತ್ರ ಮತ್ತು ಯಂತ್ರ ಸಾಧನಗಳನ್ನು ಮಾರಿದೆ ಎಂಬುದು ಅರ್ಜಿದಾರರ ವಾದವಾಗಿದೆ. ಈ ಸಂದರ್ಭದಲ್ಲಿ "ಪ್ರತ್ಯರ್ಜಿದಾರ–ಕಂಪನಿಯ ವಾದಗಳನ್ನು ಸುಸ್ಥಾಪಿಸುವ ಹಾಗೂ ಒತ್ತೆಯಿಟ್ಟ ಸ್ಥಿರಯಂತ್ರ ಮತ್ತು ಯಂತ್ರ ಸಾಧನಗಳ ಮಾರಾಟದಿಂದ ಅರ್ಜಿದಾರ–ಬ್ಯಾಂಕು ವಸೂಲಿ ಮಾಡಲಾದ ಹಣದ ಪ್ರಮಾಣದ ವಿಷಯಕ್ಕೆ ಸ್ಪಷ್ಟತೆಯನ್ನು ತರುವ ದೃಷ್ಟಿಯಿಂದ, ಪ್ರತ್ಯರ್ಜಿದಾರ–ಕಂಪನಿಯು

ಅರ್ಜಿದಾರ–ಬ್ಯಾಂಕಿನ ವ್ಯವಸ್ಥಾಪಕ ಶ್ರೀ ಸಂದೇಶ್ ಪ್ರಭು ಅವರನ್ನು ಪಾಟೀ ಸವಾಲು ಮಾಡಲು ಇಚ್ಛಿಸುತ್ತದೆ'' ಎಂದು ಅರ್ಜಿದಾರರ ಪರವಾಗಿ ನಿರ್ದಿಷ್ಟವಾಗಿ ವಾದಿಸಲಾಗಿದೆ.

8. ಆ ಸಂಗತಿಗಳ ಹಿನ್ನೆಲೆಯಲ್ಲಿ, ಅರ್ಜಿದಾರರು ವಸೂಲಿಯ ವ್ಯವಹರಣೆಗಳನ್ನು ಬೆಳೆಸುವ ಉದ್ದೇಶದಿಂದ ಮಾತ್ರವಲ್ಲದೆ, ಬ್ಯಾಂಕು ತನ್ನ ವಾದವನ್ನು ಸಾಬೀತು ಮಾಡಲು ಪ್ರತ್ಯೇಕವಾಗಿ ಅವಲಂಬಿಸಿವೆ. ದಸ್ತಾವೇಜೀಯ ಸಾಕ್ಷ್ಯದ ಪರಿಮಾಣಕ್ಕೆ ವಿರುದ್ಧವಾಗಿ ಸಾಕ್ಷಿದಾರನ ಮೌಖಿಕ ಸಾಕ್ಷ್ಯದಿಂದ ಉದ್ಧೃತಗೊಳಿಸಬೇಕಾದ ಸಾಕ್ಷ್ಯದ ಮೂಲಕ ತಮ್ಮ ವಾದವನ್ನು ರುಜುವಾತುಪಡಿಸಲು ಪ್ರಯತ್ನಿಸುವ ಮೂಲಕ ಸಹ ಇಂಥ ವಿವಾದಗಳನ್ನು ಸೃಷ್ಟಿಸಿ, 2011ರ ವರ್ಷದಿಂದಲೂ ವ್ಯವಹರಣೆಗಳನ್ನು ಬೆಳೆಸುತ್ತಾ ಬಂದಿದ್ದರು.

9. ಅರ್ಜಿದಾರರ ಮೂಲ ಅರ್ಜಿಯನ್ನು ಡಿ.ಆರ್.ಟಿ. ನಿಯಮಗಳ ನಿಯಮ 12ರ ಉಪಬಂಧಗಳ ಅಡಿಯಲ್ಲಿ ಮಾಡಲಾಯಿತೆಂಬ ಕಾನೂನು ಪ್ರತಿಪಾದನೆಯ ಬಗ್ಗೆ ಯಾವುದೇ ವಿವಾದವಿಲ್ಲ. ನಿಯಮ 12ರ ಸಂಬಂಧಪಟ್ಟ ಭಾಗವನ್ನು ಈ ಕೆಳಗಿನಂತೆ ಉದ್ಧೃತಗೊಳಿಸಲಾಗಿದೆ :

> **''12. ಪ್ರತ್ಯರ್ಜಿದಾರನಿಂದ ಉತ್ತರ ಹಾಗೂ ಇತರ ದಸ್ತಾವೇಜುಗಳ ಸಲ್ಲಿಕೆ.–**
>
> (1) ರಿಂದ (5) -------
>
> (6) ನ್ಯಾಯಮಂಡಳಿಯು, ಯಾವುದೇ ಸಮಯದಲ್ಲಿ, ಸೂಕ್ತ ಕಾರಣಕ್ಕಾಗಿ, ಯಾವುದೇ ನಿರ್ದಿಷ್ಟ ಸಂಗತಿ ಅಥವಾ ಸಂಗತಿಗಳನ್ನು ಅಫಿಡವಿಟ್‌ನಿಂದ ರುಜುವಾತು ಗೊಳಿಸತಕ್ಕದ್ದೆಂದು ಅಥವಾ ಯಾರೇ ಸಾಕ್ಷಿದಾರನ

ಅಫಿಡವಿಟ್ಟನ್ನು, ನ್ಯಾಯಮಂಡಳಿಯು ಸೂಕ್ತವಾಗಿದೆಯೆಂದು ಭಾವಿಸುವಂತೆ, ಅಂಥ ಷರತ್ತುಗಳ ಮೇಲೆ ಸುನಾವಣೆಯನ್ನು ಓದತಕ್ಕದ್ದೆಂದು ಆದೇಶಿಸಬಹುದು :

ಪರಂತು, ಸಂಬಂಧಪಟ್ಟ ಪಕ್ಷಕಾರರು ಅಫಿಡವಿಟ್‌ಗಳನ್ನು ಸಲ್ಲಿಸಿದ ನಂತರ, ಅರ್ಜಿದಾರನಾಗಲಿ ಅಥವಾ ಪ್ರತ್ಯರ್ಜಿದಾರನಾಗಲಿ ಸಾಕ್ಷಿದಾರನನ್ನು ಪಾಟೀಸವಾಲಿಗೆ ಹಾಜರುಪಡಿಸಲು ಇಚ್ಛಿಸಿದ್ದಾನೆಂದು, ಮತ್ತು ಅಂಥ ಸಾಕ್ಷಿದಾರನನ್ನು ಹಾಜರುಪಡಿಸಬಹುದೆಂದು ಮತ್ತು ಹಾಗೆ ಮಾಡುವುದು ಅಗತ್ಯವೆಂದು ನ್ಯಾಯಮಂಡಳಿಗೆ ಕಂಡುಬಂದಲ್ಲಿ, ನ್ಯಾಯಮಂಡಳಿಯು ದಾಖಲಿಸಿಕೊಳ್ಳಬಹುದಾದ ಸೂಕ್ತ ಕಾರಣಗಳಿಗಾಗಿ ಸಾಕ್ಷಿದಾರನಿಗೆ ಪಾಟೀಸವಾಲಿಗೆ ಹಾಜರಾಗಬೇಕೆಂದು ಆದೇಶಿಸತಕ್ಕದ್ದು, ಮತ್ತು ಸಾಕ್ಷಿದಾರನು ಪಾಟೀಸವಾಲಿಗೆ ಹಾಜರಾಗದಿರುವ ಸಂದರ್ಭದಲ್ಲಿ, ಆಗ ಆ ಅಫಿಡವಿಟ್ಟನ್ನು ಸಾಕ್ಷ್ಯವನ್ನಾಗಿ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಅಷ್ಟೇಅಲ್ಲದೆ, ಈ ಪರಂತುಕದಲ್ಲಿ ನೀಡಲಾದುದನ್ನು ಹೊರತುಪಡಿಸಿ ಬೇರಾವುದೇ ಮೌಖಿಕ ಸಾಕ್ಷ್ಯವನ್ನು ಅನುಮತಿಸಲಾಗುವುದಿಲ್ಲ.

(7) ಪ್ರತ್ಯರ್ಜಿದಾರನು ಅರ್ಜಿದಾರನಿಂದ ಮಾಡಲಾದ ಕ್ಲೇಮನ್ನು ಸಂದಾಯ ಮಾಡುವ ತನ್ನ ಬಾಧ್ಯತೆಯನ್ನು ನಿರಾಕರಿಸಿದಲ್ಲಿ, ಪ್ರಕರಣದ ಸಂಗತಿಗಳನ್ನು ತಿಳಿದಿರುವ ಅಥವಾ ದಾಖಲೆಯ ಪರಿಶೀಲನೆ ಆಧಾರದ ಮೇಲೆ ಅರ್ಜಿಯ ಮತ್ತು ಸಾಕ್ಷ್ಯವಾಗಿರುವ ದಸ್ತಾವೇಜುಗಳ ಒಳಾಂಶಗಳಿಗೆ ಸಂಬಂಧಿಸಿದಂತೆ ಅಫಿಡವಿಟ್ಟನ್ನು ಪ್ರಮಾಣ

ಮಾಡಲಾದ ಅರ್ಜಿದಾರನ ಅಫಿಡವಿಟ್‌ನ ಮೇರೆಗೆ ನ್ಯಾಯಮಂಡಳಿಯು ಕಾರ್ಯನಿರ್ವಹಿಸುತ್ತದೆ.

(8) ಬ್ಯಾಂಕುದಾರರ ಪುಸ್ತಕಗಳ ಸಾಕ್ಷ್ಯ ಅಧಿನಿಯಮ, 1891ರ (1891ರ 18) ಪ್ರಕರಣ 4ರಲ್ಲಿ ಒಳಗೊಂಡಂತೆ ಉಪಬಂಧಗಳನ್ನು ಅರ್ಜಿದಾರನು ಪ್ರಕರಣ 19ರ ಉಪಪ್ರಕರಣ (1)ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯೊಂದಿಗೆ ಒದಗಿಸಿದ ಬ್ಯಾಂಕುದಾರರ ಪುಸ್ತಕದಲ್ಲಿ ಯಾವುದೇ ನಮೂದಿನ ಪ್ರಮಾಣೀಕೃತ ಪ್ರತಿಗೆ ಅನ್ವಯಿಸತಕ್ಕದ್ದು".

ಮೇಲ್ಕಂಡ ನಿಯಮದ ಸ್ಕೀಮಿನಿಂದ ಮತ್ತು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಬರಬೇಕಾದ ಸಾಲಗಳ ವಸೂಲಿ ಅಧಿನಿಯಮ, 1993ರ ಪ್ರಕರಣ 22ರ ಉಪಬಂಧಗಳಿಂದ ಸ್ಪಷ್ಟವಾಗಿದೆ. ಡಿ.ಆರ್.ಟಿ. ಮತ್ತು ಅಪೀಲು ನ್ಯಾಯಾಧಿಕರಣಗಳು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಿಂದ ವಿಧಿಸಲಾದ ಕಾರ್ಯವಿಧಾನಕ್ಕೆ ಬದ್ಧವಾಗಿಲ್ಲ, ಮತ್ತು ಸಂಬಂಧಪಟ್ಟ ಕಾನೂನು ಉಪಬಂಧಗಳು ಮತ್ತು ನಿಯಮಗಳಿಗೆ ಒಳಪಟ್ಟು, ನ್ಯಾಯಮಂಡಳಿಗಳು ಸ್ವತಃ ತಮ್ಮದೇ ಕಾರ್ಯವಿಧಾನವನ್ನು ವಿನಿಯಮನಗೊಳಿಸುವ ಅಧಿಕಾರಗಳನ್ನು ಹೊಂದಿವೆ. ಇಂಥ ಸ್ಕೀಮಿನ ಅಡಿಯಲ್ಲಿ, ನ್ಯಾಯಮಂಡಳಿಯ ಮುಂದೆ ಸಂಗತಿಗಳನ್ನು ಸಾಬೀತುಪಡಿಸುವ ಸಾಮಾನ್ಯ ವಿಧಾನವೆಂದರೆ, ನ್ಯಾಯಾಧಿಕರಣವು ವಿಧಿಸಬಹುದಾದ ಅಂಥ ಷರತ್ತಿನ ಮೇಲೆ ಓದಲಾಗುವ ಯಾರೇ ಸಾಕ್ಷಿದಾರರ ಅಫಿಡವಿಟ್‌ಗೆ ಸಂಬಂಧಿಸಿದ ಉಪಬಂಧಗಳಿಗೊಳಪಟ್ಟು, ಅಫಿಡವಿಟ್‌ನಿಂದ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವಿಕೆಯಿಂದ ಮಾಡುವುದಾಗಿದೆ. ನಿಯಮ 12ರ ಉಪನಿಯಮ (6)ರ ಪರಂತುಕದಲ್ಲಿ ಮಾಡಲಾದ ವಿಶೇಷ ಉಪಬಂಧದ ಮೂಲಕ ಪಕ್ಷಕಾರನು ಸಾಕ್ಷಿದಾರನನ್ನು ಪಾಟೀಸವಾಲಿಗಾಗಿ ಹಾಜರುಪಡಿಸಲು ಇಚ್ಛಿಸುತ್ತಾನೆಂದು ಮತ್ತು ಅಂಥ ಸಾಕ್ಷಿದಾರನನ್ನು ಹಾಜರುಪಡಿಸಬಹುದೆಂದು ಮತ್ತು ಹಾಗೆ ಮಾಡುವುದು

ಅಗತ್ಯವೆಂದು ನ್ಯಾಯಮಂಡಳಿಗೆ ಕಂಡುಬಂದಲ್ಲಿ, ನ್ಯಾಯಮಂಡಳಿಯು ದಾಖಲಿಸಬೇಕಾದ ಸಾಕಷ್ಟು ಕಾರಣಗಳಿಗಾಗಿ, ಸಾಕ್ಷಿದಾರನನ್ನು ಪಾಟೀಸವಾಲಿಗೆ ಹಾಜರುಪಡಿಸಬೇಕೆಂದು ಆದೇಶಿಸತಕ್ಕದ್ದೆಂದು ನಿಗದಿಪಡಿಸಲಾಗಿದೆ. ಅಂಥ ಆದೇಶವನ್ನು ಮಾಡಿದ ನಂತರ, ಸಾಕ್ಷಿದಾರನು ಪಾಟೀಸವಾಲಿಗಾಗಿ ಹಾಜರಾಗದಿದ್ದಲ್ಲಿ, ಅದಾಗಲೇ ಕಾನೂನಿನ ಪ್ರಕಾರ ಮಂಡಿಸಲಾದ ಅಫಿಡವಿಟ್ಟನ್ನು ಸಾಕ್ಷ್ಯವನ್ನಾಗಿ ತೆಗೆದುಕೊಳ್ಳತಕ್ಕದ್ದಲ್ಲ. ಹೀಗಾಗಿ, ಸಾಕ್ಷಿದಾರನ ವಿಚಾರಣೆಯ ಅಗತ್ಯತೆ ಬಗ್ಗೆ ನ್ಯಾಯಾಧಿಕರಣದ ಸಮ್ಮತಿಯ ಮನವರಿಕೆ, ಸಾಕ್ಷಿದಾರನ ಪಾಟೀಸವಾಲಿಗೆ ಆದೇಶವನ್ನು ಮಾಡಲು ಸಂದಿಗ್ಧವಾಗಿದೆ ಮತ್ತು ಅಂಥ ಆದೇಶವನ್ನು ಪಾಲಿಸದಿರುವುದರಿಂದ ಪಕ್ಷಕಾರರಿಗೆ ಗಂಭೀರ ಪರಿಣಾಮವನ್ನುಂಟುಮಾಡುತ್ತದೆ. ಈ ಸಂದರ್ಭದಲ್ಲಿ, ನಿಯಮವು, ಹಾಗೆ ಮಾಡುವ ಅಗತ್ಯತೆಗೆ ಸಂಬಂಧಿಸಿ ನ್ಯಾಯಾಧಿಕರಣದ ಸಮ್ಮತಿಯನ್ನು ಅಗತ್ಯಪಡಿಸುವುದಷ್ಟೇ ಅಲ್ಲದೆ, ಸಾಕ್ಷಿದಾರನು ಪಾಟೀಸವಾಲಿಗೆ ಹಾಜರಾಗಬೇಕೆಂದು ಆದೇಶಿಸುವುದಕ್ಕೆ ಸಾಕಷ್ಟು ಕಾರಣಗಳನ್ನು ದಾಖಲಿಸುವುದನ್ನು ಸಹ ಅಗತ್ಯಪಡಿಸುತ್ತದೆ.

10. ಈಗಿನ ಪ್ರಕರಣದ ಸಂಗತಿಗಳಲ್ಲಿ, ಈ ಮೊದಲೇ ಗಮನಿಸಿರುವಂತೆ, ಡಿ.ಆರ್.ಟಿ.ಯ ಮೂಲ ಆದೇಶವು ಅರ್ಜಿದಾರರ ಅರ್ಜಿಯನ್ನು ಅನುಮತಿಸಲು ಯಾವುದೇ ಕಾರಣವನ್ನೂ ದಾಖಲಿಸಲಿಲ್ಲ. ಕೇವಲ ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರ ವಾದಗಳನ್ನು ಮಾತ್ರ ದಾಖಲಿಸಿ ಮತ್ತು ನಂತರ "ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರ ವಾದವು ಹೆಚ್ಚಿನ ಮಟ್ಟದ ಸಂಭಾವ್ಯತೆಗಳನ್ನು ಒಳಗೊಂಡಿರುವುದಾಗಿ ಕಂಡುಬರುತ್ತದೆ" ಎಂದು ಹೇಳಿಕೆ ನೀಡುವುದನ್ನು ಕಾರಣಗಳ ದಾಖಲಿಸುವಿಕೆಯೆಂದು ಪರಿಗಣಿಸಲಾಗುವುದಿಲ್ಲ. ಅಂಥ ಸಂದರ್ಭಗಳಲ್ಲಿ, ಬ್ಯಾಂಕು ಡಿ.ಆರ್.ಎ.ಟಿ.ಯನ್ನು ಈ ಮೇಲಿನಂತೆ ಸಾರಾಂಶವಿರುವ ಆದೇಶದ ವಿರುದ್ಧ ಪ್ರಸ್ತಾಪಿಸಿದಾಗ, ಅಪೀಲು ನ್ಯಾಯಾಧಿಕರಣಕ್ಕೆ ಹಸ್ತಕ್ಷೇಪ ಮಾಡುವುದನ್ನು ಬಿಟ್ಟು ಬೇರೆ ಅವಕಾಶವಿಲ್ಲ. ಹಾಗಿದ್ದರೂ, ಇದರಲ್ಲಿ ಪ್ರಶ್ನಿತ ಆದೇಶದಿಂದ ಡಿ.ಆರ್.ಟಿ.ಯ ಆದೇಶದಲ್ಲಿ ಹಸ್ತಕ್ಷೇಪ ಮಾಡುವಾಗ, ಅಪೀಲು ನ್ಯಾಯಾಧಿಕರಣವು "ಅಪೀಲುದಾರ ಬ್ಯಾಂಕು ನೀಡಿದ ಹೇಳಿಕೆಯ ಅನುಸಾರ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳು

ಕೆಳಗಿನ ನ್ಯಾಯಾಧಿಕರಣದ ಮುಂದೆ ಈಗಾಗಲೇ ಲಭ್ಯವಿವೆ ಮತ್ತು ಆದ್ದರಿಂದ ಬ್ಯಾಂಕಿನ ಸಾಕ್ಷಿದಾರರ ವಿಚಾರಣೆಯ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಕಂಡುಬಂದಿದೆ" ಎಂದು ಹೇಳುವ ಮೂಲಕ ಅರ್ಜಿದಾರರ ಮೂಲ ಅರ್ಜಿಯ ಗುಣಾರ್ಹತೆಗಳ ಆಧಾರದ ಮೇಲೆ ಅಪೀಲು ನ್ಯಾಯಾಧಿಕರಣವು ಸ್ವತಃ ತನ್ನದೇ ಕಾರಣವನ್ನು ಸಹ ದಾಖಲಿಸಿದೆ.

11. ಇದರಲ್ಲಿ ಮೇಲೆ ದಾಖಲಿಸಿದ ಸಂಗತಿಗಳು ಮತ್ತು ಕಾನೂನು ದೃಷ್ಟಿಯಿಂದ, ಡಿ.ಆರ್.ಟಿ. ನಿಯಮಗಳ 12(6)ನೇ ನಿಯಮದ ಅಡಿಯಲ್ಲಿ ಡಿ.ಆರ್.ಟಿ.ಯು ತನ್ನ ಅಧಿಕಾರಗಳನ್ನು ಚಲಾಯಿಸುವಲ್ಲಿ ತನ್ನ ಕಡೆಯಿಂದಾದ ಲೋಪದೋಷಗಳ ಕಾರಣದಿಂದ, ಈಗಿನ ಅರ್ಜಿಗಳು ಸಂವಿಧಾನದ ಅನುಚ್ಛೇದ 227ರ ಅಡಿಯಲ್ಲಿ ನಿರ್ವಹಣಾ ಯೋಗ್ಯವಾಗಿಲ್ಲ ಅಥವಾ ಗುಣಾರ್ಹತೆಗಳ ಆಧಾರದ ಮೇಲೆ ಸ್ವೀಕಾರಾರ್ಹವಾಗಿಲ್ಲವೆಂದು ಸ್ಪಷ್ಟವಾಗಿ ಕಂಡುಬರುತ್ತದೆ.

12. ಈ ಸಂದರ್ಭಗಳ ಅಡಿಯಲ್ಲಿ, ಡಿ.ಆರ್.ಟಿ. ಸಮಕ್ಷಮದ ಸುನಾವಣೆಯಲ್ಲಿ ಅತಿಯಾದ ವಿಳಂಬಕ್ಕೆ, ಅದರಿಂದ ವಾದಕಾಲೀನ ವ್ಯವಹರಣೆಗಳು ಮತ್ತು ಅಪೀಲುಗಳು ಕಾರಣವಾಗಿವೆಯೆಂದು ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರು ಅಭಿಪ್ರಾಯಪಟ್ಟಿದ್ದರೂ, ವೆಚ್ಚಕ್ಕೆ ಯಾವುದೇ ಆದೇಶವಿಲ್ಲದೆ, ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಈಗ ಡಿ.ಆರ್.ಟಿ. ಮುಂದೆ ಬಾಕಿ ಇರುವ ಮೂಲ ವ್ಯವಹರಣೆಗಳನ್ನು ಶೀಘ್ರವಾಗಿ ಮುಂದುವರೆಸತಕ್ಕದ್ದು ಮತ್ತು ಪಕ್ಷಕಾರರು ಕಾರ್ಯ ಸಾಧ್ಯವಾದಷ್ಟು ಬೇಗನೆ, ಬೆಂಗಳೂರಿನ ಡಿ.ಆರ್.ಟಿ. ಮುಂದಿರುವ ಮೂಲ ಓ.ಎ.ಸಂಖ್ಯೆ 393/2011ರ ಸುನಾವಣೆ ಮಾಡುವಲ್ಲಿ ಹಾಗೂ ಇತ್ಯರ್ಥದಲ್ಲಿ ಸಹಕರಿಸತಕ್ಕದೆಂದು ನಾವು ಆಶಿಸಿ, ನಿರೀಕ್ಷಿಸುತ್ತೇವೆ.

---